

# 2019: ನಿರೀಕ್ಷೆ

‘ಪೈಲ್ವಾನ್’ ಸಿನಿಮಾದಲ್ಲಿ ಸುದೀಪ್

‘ಕುರುಕ್ಷೇತ್ರ’, ‘ಪೈಲ್ವಾನ’, ‘ಅವನೇ ಶ್ರೀಮನ್ನಾರಾಯಣ’, ‘ಯುವರತ್ನ’ – ಈ ಹೆಸರುಗಳಷ್ಟೇ ಸಾಕು, 2019ರ ಕನ್ನಡ ಚಿತ್ರರಂಗದ ಉತ್ತರಾರ್ಧದ ಸಂಭಾವ್ಯ ಸುಗ್ಗಿಯನ್ನು ಅಂದಾಜು ಮಾಡಲು.

2017ರಲ್ಲಿ ತೆರೆಕಂಡ ‘ಹೆಬ್ಬುಲಿ’ ಸುದೀಪ್ ನಾಯಕರಾಗಿ ನಟಿಸಿದ ಮುಖ್ಯ ಚಿತ್ರ. ಕಳೆದ ವರ್ಷ ‘ರಾಜು ಕನ್ನಡ ಮೀಡಿಯಂ’ ಹಾಗೂ ‘ಅಂಬಿ ನಿಂಗ್ ವಯಸ್ಸಾಯ್ತೋ’ ಹಾಗೂ ‘ದಿ ವಿಲನ್’ ಚಿತ್ರಗಳು ತೆರೆಕಂಡಿದ್ದವು. ಈ ಚಿತ್ರಗಳ ಮೂಲಕ ಅವರು ವರ್ಷವಿಡೀ ಸುದ್ದಿಯಲ್ಲಿದ್ದರು. ಆದರೆ, ಮೂರರಲ್ಲಿ ಒಂದು ಚಿತ್ರದಲ್ಲೂ ಅವರದು ಏಕಮೇವ ನಾಯಕ ಎನ್ನುವಂತಹ ಪಾತ್ರವಲ್ಲ. ‘ರಾಜು ಕನ್ನಡ ಮೀಡಿಯಂ’ ಚಿತ್ರದಲ್ಲಿ ಗೌರವ ಪಾತ್ರ. ಅಂಬಿಗೆ ವಯಸ್ಸಾದ ಕಥನದಲ್ಲಿ ಯೌವನದ ದಿನಗಳ ಅಂಬರೀಶ್ ಪಾತ್ರ. ಶಿವರಾಜ್‌ಕುಮಾರ್ ಹಾಗೂ ಸುದೀಪ್ ಮೊದಲ ಬಾರಿಗೆ ಒಟ್ಟಿಗೆ ನಟಿಸಿದ್ದರಿಂದಾಗಿ ಪ್ರೇಮ್ ನಿರ್ದೇಶನದ ‘ದಿ ವಿಲನ್’ ಸುದ್ದಿಯಾಗಿತ್ತು. ಆದರೆ, ಅಪರೂಪದ ಜೋಡಿಯ ಸಮೀಕರಣ ಅಭಿಮಾನಿಗಳ ಮನಸ್ಸು ಗೆಲ್ಲಲಿಲ್ಲ. ಸಿಡಿಲು ಗುಡುಗಿನ ಅಬ್ಬರವೇ ಹೆಚ್ಚಾಗಿ, ಮಳೆ ಸುಮಾರು ಎನ್ನುವಂತೆ ‘ವಿಲನ್’ ನಿರೀಕ್ಷಿತ ಗೆಲುವು ಕಾಣಲಿಲ್ಲ.

‘ವಿಲನ್’ ಹಿನ್ನಡೆ ಆ ಚಿತ್ರಕ್ಕಷ್ಟೇ ಸೀಮಿತವಾದುದಲ್ಲ. ಆ ಫಲಿತಾಂಶ, ತಾರಾ ವರ್ಚಸ್ಸಿನ ನಾಯಕನಟರು ಒಟ್ಟಿಗೆ ಸಿನಿಮಾ ಮಾಡುವ ಸಾಧ್ಯತೆಗಳಿಗಾದ ಹಿನ್ನಡೆಯೂ ಹೌದು. ಕನ್ನಡದಲ್ಲಿ ಮಲ್ಟಿ ಹೀರೊ ಚಿತ್ರಗಳೇ ಅಪರೂಪ. ಇಂಥ ಸಂದರ್ಭದಲ್ಲಿ ‘ವಿಲನ್’ ಗೆದ್ದಿದ್ದರೆ, ಮತ್ತಷ್ಟು ನಾಯಕರು ಯುಗಳಗೀತೆ ಹಾಡಲು ಮನಸು ಮಾಡುತ್ತಿದ್ದರೇನೊ? ‘ಇನ್ನು ಮುಂದೆ ಮಲ್ಟಿ ಹೀರೊ ಚಿತ್ರಗಳಲ್ಲಿ ನಟಿಸುವುದಿಲ್ಲ’ ಎಂದು ಸುದೀಪ್ ಹೇಳಿರುವುದು ‘ವಿಲನ್’ ಚಿತ್ರದ ಫಲಿತಾಂಶದ ಫಲಶ್ರುತಿಯೇ ಆಗಿದೆ.

## ಲಕ್ಷ್ಮೀ ಜಪದಲ್ಲಿ ‘ಪೈಲ್ವಾನ’-‘ಕುರುಕ್ಷೇತ್ರ’

ಸದ್ಯಕ್ಕೆ ಸುದೀಪ್ ಗೆಲುವಿಗಾಗಿ ಹಸಿದಿರುವ ‘ಹೆಬ್ಬುಲಿ’. ಕೃಷ್ಣ ನಿರ್ದೇಶನದ ‘ಪೈಲ್ವಾನ’ ಸಿನಿಮಾಕ್ಕಾಗಿ ಅವರು ಸಾಕಷ್ಟು ಬೆವರು ಸುರಿಸಿದ್ದಾರೆ. ಎರಡು ದಶಕಕ್ಕೂ ಹೆಚ್ಚಿನ ಚಿತ್ರಜೀವನದಲ್ಲಿ ಇದೇ ಮೊದಲ ಬಾರಿಗೆ ಅವರು ಪಾತ್ರಕ್ಕಾಗಿ ತಮ್ಮ ದೇಹವನ್ನು ಸಾಕಷ್ಟು ದಂಡಿಸಿ, ಮೈ ಹುರಿಗಟ್ಟಿಸಿದ್ದಾರೆ. ಪೈಲ್ವಾನ ಎಂದರೆ ತಮಾಷೆಯೇ? ಕನ್ನಡವೂ ಸೇರಿದಂತೆ ಎಂಟು ಭಾಷೆಗಳಲ್ಲಿ ಪೈಲ್ವಾನನನ್ನು ತೆರೆಕಾಣಿಸಲು ಚಿತ್ರತಂಡ ಸಿದ್ಧತೆ ನಡೆಸಿದೆ. ಇದಕ್ಕೆ ತಕ್ಕನಾಗಿ ಚಿತ್ರದ ಪೋಸ್ಟರ್‌ಗಳನ್ನು – ತಮಿಳಿನಲ್ಲಿ ವಿಜಯ್ ಸೇತುಪತಿ, ತೆಲುಗಿನಲ್ಲಿ ಚಿರಂಜೀವಿ,




‘ಅವನೇ ಶ್ರೀಮನ್ನಾರಾಯಣ’ ಸಿನಿಮಾದಲ್ಲಿ ರಕ್ಷಿತ್ ಶೆಟ್ಟಿ